

بِسْمِ اللّٰهِ الرَّحْمٰنِ الرَّحِيم

# ಅಮೇರಿಕ ಮತ್ತು ಗ್ವಾಟೇಮಾಲಾ ಪ್ರವಾಸ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 16–11–2018 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ವಾರದ ಜುಮುಅ ಖುತ್‌ಬದಲ್ಲಿ ತಹ್‌ರೀಕ್ ಜದೀದ್ ಹೊಸ ವರ್ಷಾರಂಭವನ್ನು ಘೋಷಣೆ ಮಾಡಿದ ಕಾರಣದಿಂದ ಅಮೇರಿಕ ಮತ್ತು ಗ್ವಾಟೆಮಾಲ ದೇಶಗಳಿಗೆ ನಾನು ಪ್ರವಾಸ ಮಾಡಿದ ಬಗ್ಗೆ ಪ್ರಸ್ತಾಪಿಸಿರಲಿಲ್ಲ. ಅಲ್ಲಾಹನ ಅನುಗ್ರಹದಿಂದ ಈ ಪ್ರವಾಸಗಳಿಂದ ಬಹಳ ಸಕಾರಾತ್ಮಕ ಪರಿಣಾಮಗಳು ಉಂಟಾಗುತ್ತವೆ. ನಮ್ಮವರೊಂದಿಗೆ ಮತ್ತು ಅನ್ಯರೊಂದಿಗೆ ಸಂಬಂಧಗಳ ದೃಷ್ಟಿಯಿಂದಲೂ ಜಮಾಅತಿನ ವ್ಯವಸ್ಥೆಯ ನಿಟ್ಟಿನಲ್ಲೂ ನೇರವಾಗಿ ಕಂಡು ಮಾಹಿತಿಗಳನ್ನು ಗಳಿಸುವುದರಿಂದ ಅನೇಕ ವಿಷಯಗಳು ನನ್ನ ಅವಗಾಹನೆಗೆ ಬರುತ್ತವೆ. ಈ ಪ್ರವಾಸಗಳಿಂದ ದೊರಕುವ ಮೂರು ಮಹತ್ವಪೂರ್ಣ ಲಾಭಗಳು ಇವುಗಳಾಗಿವೆ. ಒಂದು, ಆ ದೇಶಗಳ ವಿದ್ಯಾಸಂಪನ್ನರಾದ ಪ್ರಭಾವಶಾಲಿ ಜನರೊಂದಿಗೆ ಸಂಪರ್ಕ ಹೊಂದಲು ಸಾಧ್ಯವಾಗುತ್ತವೆ. ನೇರ ಸಂದರ್ಶನಗಳ ಮೂಲಕ, ಮಸ್‌ಜಿದ್‌ಗಳ ಉದ್ಘಾಟನೆ ಮತ್ತು ಸ್ವಾಗತ ಸಮಾರಂಭಗಳು ಮೊದಲಾದುವುಗಳ ಮೂಲಕ ಇದು ಸಾಧ್ಯವಾಗುತ್ತವೆ. ಎರಡನೆಯದಾಗಿ, ಮೀಡಿಯಾ ಮೂಲಕ ಇಸ್ಲಾಮ್ ಮತ್ತು ಅಹ್ಮದಿಯ್ಯತ್ ಬಗ್ಗೆ ಪರಿಚಯ ಮತ್ತು ಇಸ್ಲಾಮಿನ ನೈಜ ಉಪದೇಶಗಳ ಬಗ್ಗೆ ಜನರಿಗೆ ತಿಳಿಯುತ್ತದೆ. ಮೂರನೆಯ ಅತಿದೊಡ್ಡ ಲಾಭವೇನೆಂದರೆ ಜಮಾಅತಿನ ಸದಸ್ಯರೊಂದಿಗೆ ವೈಯ್ಯಕ್ತಿಕ ಸಂಬಂಧ ಮತ್ತು ಪರಿಚಯವಾಗುತ್ತದೆ. ಅದರ ಪರಿಣಾಮವಾಗಿ ಅವರ ಈಮಾನ್ ಸಹ ವರ್ಧಿಸುತ್ತದೆ.

ಈ ಪ್ರವಾಸದ ಸಂದರ್ಭದಲ್ಲಿ ಅಲ್ಲಾಹನ ಅನುಗ್ರಹದಿಂದ ಅಮೇರಿಕದಲ್ಲಿ ಮೂರು ಮಸ್‌ಜಿದ್‌ಗಳನ್ನು ಉದ್ಘಾಟಿಸಲು ಭಾಗ್ಯ ಲಭಿಸಿತು. ಮಕ್ಕಳು, ಯುವಕರು, ಮಹಿಳೆಯರು ಮತ್ತು ಪುರುಷರು ನಾನು ಹೋದ ಎಲ್ಲಾ ಸ್ಥಳಗಳಲ್ಲಿ ಮಸ್‌ಜಿದ್‌ಗೆ ಆಗಮಿಸಿ ಹೆಚ್ಚು ಸಮಯ ಅಲ್ಲಿಯೇ ವಿನಿಯೋಗಿಸುತ್ತಾ ಇರುತ್ತಾರೆ.

ಸಾಮಾನ್ಯವಾಗಿ ಅಮೇರಿಕದಲ್ಲಿ ರಾಜಕೀಯ ನಾಯಕರೂ, ವಿದ್ಯಾವಂತರಾದವರೂ, ಜನಸಾಮಾನ್ಯರೂ ಮಾತುಗಳನ್ನು ಆಲಿಸುವವರೂ ಒಳ್ಳೆಯ ಮಾತುಗಳನ್ನು ಮೆಚ್ಚುವವರೂ ಆಗಿರುತ್ತಾರೆ. ಇಸ್ಲಾಮಿನ ನೈಜ ತತ್ವಗಳು ಅವರಿಗೆ ಸರಿಯಾದ ರೀತಿಯಲ್ಲಿ ತಲಪಿಲ್ಲ. ಯಾರಿಗೆ ಇಸ್ಲಾಮಿನ ನೈಜ ತತ್ವಗಳು ತಲಪಿದೆಯೋ ಮತ್ತು ಯಾರು ನಮ್ಮ ಜಮಾಅತ್‌ನೊಂದಿಗೆ ಸಂಪರ್ಕ ಹೊಂದಿರುವರೋ ಅವರು ಇಸ್ಲಾಮ್ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ಹೊಂದಿದ್ದಾರೆ. ಆದುದರಿಂದ ಇಸ್ಲಾಮಿನ ನೈಜ ಸಂದೇಶವನ್ನು ಅಮೇರಿಕದಲ್ಲಿಯೂ ಅದೇರೀತಿ ಲೋಕದ ಇತರ ಪ್ರದೇಶಗಳಲ್ಲಿಯೂ ಬಹಳ ಪರಿಶ್ರಮದೊಂದಿಗೆ ಸರಿಯಾದ ರೀತಿಯಲ್ಲಿ ಹಂಚಬೇಕಾದುದು ನಮ್ಮ ಕೆಲಸವಾಗಿದೆ. ನಾವು ತಲಪಿಸುವ ಸಂದೇಶದ ಮೂಲಕ ಮುಸ್ಲಿಮೇತರರಿಗೆ ಇಸ್ಲಾಮಿನ ತತ್ವಗಳು ಮನವರಿಕೆ ಆಗುತ್ತದೆಯಲ್ಲದೆ ಅಹ್ಮದಿಯೇತರ ಮುಸ್ಲಿಮರಿಗೂ ನೈಜ ಇಸ್ಲಾಮ್ ಏನೆಂದು ತಿಳಿಯುತ್ತದೆ. ಇಂತಹ ಅನುಭವ ಬಹುತೇಕ ಸ್ಥಳಗಳಲ್ಲಿ ಉಂಟಾಗುತ್ತದೆ. ಅಮೇರಿಕದಲ್ಲಿಯೂ ಈ ಅನುಭವ ಉಂಟಾಯಿತು. ಅಹ್ಮದಿಯೇತರ ಮುಸ್ಲಿಮರು ಇಸ್ಲಾಮಿನ ಸುಂದರ ತತ್ವಗಳ ಬಗ್ಗೆ ನಮ್ಮಿಂದ ಆಲಿಸುವಾಗ ಅವರಿಗೆ ಭಾಸವಾಗುತ್ತದೆ ನಾವು ಯಾವುದೇ ರೀತಿಯ ಕೀಳರಿಮೆಯನ್ನು ಹೊಂದುವ ಆವಶ್ಯಕತೆ ಇಲ್ಲ ಎಂದು. ಲೋಕದ ಸಮಸ್ಯೆಗಳಿಗಿರುವ ಪರಿಹಾರ ಇಸ್ಲಾಮ್ ಆಗಿದೆ ಎಂದು ಅವರು ತಿಳಿದುಕೊಳ್ಳುತ್ತಾರೆ. ಕೆಲವು ಅಹ್ಮದಿಯೇತರ ಮುಸ್ಲಿಮರು ಇದನ್ನು ಬಹಿರಂಗವಾಗಿ ಹೇಳಿದರು. ನೀವು ಇಸ್ಲಾಮಿನ ಸುಂದರ ಉಪದೇಶಗಳನ್ನು ಹೇಗೆ ಜನರ ಮುಂದೆ ಇರಿಸುತ್ತಿರುವಿರೋ ಅದೇ ನೈಜ ರೀತಿಯಾಗಿದೆ ಎಂದು.

(ಕೆಲವು ಅತಿಥಿಗಳ ಅನಿಸಿಕೆಗಳನ್ನು ವಿವರಿಸುತ್ತಾ ಹುಝೂರ್ ಹೇಳಿದರು): ಫಿಲಡೆಲ್ಫಿಯಾದಲ್ಲಿ ಮಸ್‌ಜಿದ್ ಬೈತುಲ್ ಆಫಿಯತ್ ಉದ್ಘಾಟನೆಯ ಸಂದರ್ಭದಲ್ಲಿ ಅಮೇರಿಕದ ಕಾಂಗ್ರೆಸ್ ಸದಸ್ಯ (ಪಾರ್ಲಿಮೆಂಟ್ ಸದಸ್ಯ) ಆನರೇಬಲ್ ಡ್ವಯಿಟ್ ಇವಾನ್ಸ್ ಆಗಮಿಸಿದ್ದರು. ಅವರು ಒಳ್ಳೆಯ ಶಬ್ದಗಳನ್ನು ಬಳಸಿ ನನ್ನೊಂದಿಗೆ ಹೇಳಿದರು: ಈ ದೊಡ್ಡ ನಗರಕ್ಕೆ ನಾನು ನಿಮ್ಮನ್ನು ಸ್ವಾಗತಿಸುತ್ತೇನೆ. ಈ ನಗರ ಸಹೋದರ ಸಹೋದರಿಯರ ಮಧ್ಯೆ ಇರುವ ಪ್ರೀತಿಯಂತಹ ನಗರವಾಗಿದೆ. ಈ ನಗರದ ಆಡಳಿತೆ ವ್ಯವಸ್ಥೆಯ ಪರವಾಗಿ ಈ ಒಂದು ಮುಸ್ಲಿಮ್ ಸಮುದಾಯದೊಂದಿಗೆ ನಾನು ಹೇಳಲು ಬಯಸುತ್ತೇನೆ, ನಾವು ನಿಮ್ಮ ಶಾಂತಿಯ ಸಂದೇಶವನ್ನು ಸ್ವಾಗತಿಸುತ್ತೇವೆ. ನಾವೆಲ್ಲರೂ ನಿಮ್ಮೊಂದಿಗಿದ್ದೇವೆ. ದ್ವೇಷ, ವೈರ, ದಬ್ಬಾಳಿಕೆ ವಿರುದ್ಧ ಎದ್ದು ನಿಲ್ಲುತ್ತೇವೆ. ಶಾಂತಿ ಸ್ಥಾಪಿಸುವ ಬಗ್ಗೆ ತಾವು ಬಹಳ ಉತ್ತಮವಾದ ಸಂದೇಶವನ್ನು ನೀಡಿರುವಿರಿ. ಇಂದಿನ ಕಾಲಘಟ್ಟದಲ್ಲಿ ಈ ಸಂದೇಶ ಬಹಳ ವೈಭವಪೂರ್ಣವಾಗಿದೆ. ಮುಸ್ಲಿಮ್ ಸಮುದಾಯ ಅಮೇರಿಕಕ್ಕೆ ಮಾತ್ರವಲ್ಲ ಸಮಸ್ತ ಲೋಕಕ್ಕೆ ಎಷ್ಟು ಮಹತ್ವಪೂರ್ಣವಾಗಿದೆ ಎಂದು ಇದರಿಂದ ಸಾಬೀತಾಗುತ್ತದೆ.

ಮೇಯರ್ ಜಾನ್ ಕೇನಿ ಹೇಳಿದರು: ಫಿಲಡೆಲ್ಫಿಯಾ ನಗರದ ಚರಿತ್ರೆಯಿಂದ ತಿಳಿಯುವುದೇನೆಂದರೆ ಧಾರ್ಮಿಕ ಸ್ವಾತಂತ್ರ್ಯ ಈ ನಗರದ ಮೂಲ ತತ್ವಗಳಲ್ಲಿ ಸೇರಿದೆ. ಈ ನಗರವನ್ನು ಈ ಅಸ್ತಿಭಾರದ ಮೇಲೆ ನಿರ್ಮಿಸಲಾಯಿತು. ನಾವು ವಿವಿಧ ಜನಾಂಗಗಳಿಗೂ ವಂಶಗಳಿಗೂ ಸೇರಿದವರಾಗಿದ್ದರೂ ಈ ನಗರ ಪ್ರತಿಯೊಬ್ಬನಿಗೂ ಸ್ವಾಗತ ನೀಡುವುದು. ನಾವು ಪರಸ್ಪರ ಒಬ್ಬರಿನ್ನೊಬ್ಬರೊಂದಿಗೆ ಸೇರಿ ಕೆಲಸ ಮಾಡಬೇಕು. ನಾವು ಒಬ್ಬರಿನ್ನೊಬ್ಬರೊಂದಿಗೆ ಗೌರವ ಭಾವದೊಂದಿಗೆ ವರ್ತಿಸಬೇಕು. ನಾವು ಒಗ್ಗೂಡಿ ಜೀವಿಸ ಬಲ್ಲೆವು ಮತ್ತು ನಮ್ಮ ಸಮಸ್ಯೆಗಳನ್ನು ಕೊನೆಗೊಳಿಸಬಲ್ಲೆವು ಎಂದು ಲೋಕಕ್ಕೆ ತೋರಿಸಿಕೊಡಬೇಕು.

ಒಬ್ಬ ಸ್ಥಳೀಯ ಕೌನ್ಸಿಲರ್ ಹೇಳಿದರು: ನಿಮ್ಮ ಶಾಂತಿ ಸಂದೇಶ ಬಹಳ ಆವಶ್ಯಕವಾಗಿತ್ತು. ಪ್ರಚಲಿತ ಸ್ಥಿತಿಗತಿಗಳ ಹಿನ್ನಲೆಯಲ್ಲಿ ಈ ಸಂದೇಶ ಇನ್ನಷ್ಟು ಹೆಚ್ಚು ಮಹತ್ವಪೂರ್ಣವಾಗಿದೆ. ನೀವೆಲ್ಲರೂ ನೆರೆಹೊರೆಯವರಿಗೆ ಆವಶ್ಯವಿರುವಾಗ ಭುಜಕ್ಕೆ ಭುಜ ಒಡ್ಡಿ ನಿಂತುಕೊಳ್ಳುವಿರಿ ಎಂಬ ನಿಮ್ಮ ಸಂದೇಶ ಫಿಲಡೆಲ್ಫಿಯಾದಲ್ಲಿ ಮಾತ್ರವಲ್ಲ ಅಮೇರಿಕದಲ್ಲೆಲ್ಲಾ ಈ ಸಂದೇಶದ ಆವಶ್ಯಕತೆ ಇದೆ.

ಅನಂತರ ಬಾಲ್ಟಿಮೋರ್ ನಗರದಲ್ಲಿ ಮಸ್‌ಜಿದ್ ಉದ್ಘಾಟಿಸಲಾಯಿತು. ಅದರ ಹೆಸರು ಬೈತುಸ್ಸಮದ್ ಎಂದಾಗಿದೆ. ಸ್ವಾಗತ ಸಮಾರಂಭಕ್ಕೆ ಬಾಲ್ಟಿಮೋರ್ ಮೇಯರ್ ಆಗಮಿಸಿದ್ದರು. ಮಹಿಳೆಯಾದ ಆಕೆ ಹೇಳುತ್ತಾರೆ: ನೀವು ಶಾಂತಿಸ್ಥಾಪನೆ ಬಗ್ಗೆ ಮಾತನಾಡಿರುವಿರಿ. ನೀವು ನೀಡಿದ ಸಂದೇಶ ಇಂದಿನ ಕಾಲಕ್ಕೆ ಆವಶ್ಯಕವಾಗಿದೆ. ನಮ್ಮ ನಗರಕ್ಕೆ ಮಾತ್ರವಲ್ಲ, ನಮ್ಮ ಸ್ಟೇಟ್‌ಗೆ ಮಾತ್ರವಲ್ಲ, ಯು.ಎಸ್.ಎ.ಗೆ ಮಾತ್ರವಲ್ಲ ಸರ್ವ ಲೋಕಕ್ಕೆ ಈ ಸಂದೇಶದ ತೀವ್ರ ಆವಶ್ಯಕತೆ ಇದೆ. ಈ ಸಂದೇಶವನ್ನು ಪ್ರತಿಯೊಬ್ಬ ವ್ಯಕ್ತಿ ಆಲಿಸಬೇಕೆಂದು ನಾನು ಭಾವಿಸುತ್ತೇನೆ. ನಾವು ಆಲಿಸುವುದಾದರೆ ನಾವು ಮನವರಿಕೆ ಮಾಡಿಕೊಳ್ಳ ಬಲ್ಲೆವು ಲೋಕದ ಸಮಸ್ಯೆಗಳಿಗಿರುವ ಏಕ ಮಾತ್ರ ಪರಿಹಾರ ಮಾರ್ಗ ಶಾಂತಿಯೇ ಆಗಿದೆ ಎಂದು ಮತ್ತು ನಾವು ಒಬ್ಬರಿನ್ನೊಬ್ಬರನ್ನು ಪ್ರೀತಿಸಲು ಕಲಿತುಕೊಳ್ಳುವೆವು.

ಯುನಿವರ್ಸಿಟಿಯ ಒಬ್ಬ ಪ್ರೊಫೆಸರ್ ಹೇಳಿದರು: ಇದೊಂದು ಆಶ್ಚರ್ಯಕರವಾದ ಸಂದೇಶವಾಗಿದೆ. ಇದರ ಮೂಲಕ ನಾವು ಸಮಾಜದಲ್ಲಿ ಮಹತ್ವಪೂರ್ಣ ಬದಲಾವಣೆಯನ್ನುಂಟು ಮಾಡಬಲ್ಲೆವು. ಯು.ಎಸ್.ಎ.ದ ಇಂದಿನ ಪರಿಸ್ಥಿತಿಯಲ್ಲಿ ಈ ಸಂದೇಶ ಬಹಳ ಮುಖ್ಯವಾದುದಾಗಿದೆ. ಈ ಆಶ್ಚರ್ಯಕರ ಸಂದೇಶ ನನ್ನ ಮೇಲೆ ಬಹಳ ಪ್ರಭಾವ ಬೀರಿದೆ. ಡಿಸ್ಟ್ರಿಕ್ಟ್ 48ರ ಸ್ಟೇಟ್ ಪ್ರತಿನಿಧಿ ಹೇಳಿದರು: ನಾನು ನಿಮ್ಮ ಸಂದೇಶವನ್ನು ಆಲಿಸಿ ಬಹಳ ಪ್ರಭಾವಿತನಾದೆನು. ನಮ್ಮ ಹೊಣೆಗಾರಿಕೆಗಳ ಬಗ್ಗೆ ನೀವು ನಮ್ಮ ಗಮನ ಹರಿಸಿರುವಿರಿ. ಪ್ರತಿಯೊಬ್ಬರನ್ನೂ ಪ್ರೀತಿಸಿರಿ ಯಾರನ್ನೂ ದ್ವೇಷಿಸಬೇಡಿರಿ ಎಂದು ಹೇಳಿದ ನಿಮ್ಮ ಮಾತು ನಮಗೆ ಆವಶ್ಯಕವಾಗಿದೆ. ನಾವು ಸ್ವತಃ ಸಮಾಜದ ಏಳಿಗೆಗೆ ಎಷ್ಟು ಪ್ರಯತ್ನಿಸಿದರೂ ಅದರ ಪ್ರಭಾವ ಅಹ್ಮದಿಯಾ ಜಮಾಅತಿನ ಇಮಾಮರ ಆಗಮನದಿಂದ ಇಲ್ಲಿ ಉಂಟಾದ ಪ್ರಭಾವದಷ್ಟು ಆಗಲಿಲ್ಲ. ಡಿಸ್ಟ್ರಿಕ್ಟ್ 41ರ ಪ್ರತಿನಿಧಿಯಾಗಿ ಆಗಮಿಸಿದ ಬಿಲಾಲ್ ಅಲಿ ಸಾಹಿಬ್ ಅವರೊಬ್ಬ ಮುಸ್ಲಿಂ ಆಗಿದ್ದರು – ಅವರು ಹೇಳಿದರು: ನೀವು ನೀಡಿದ ಸಂದೇಶದ ಪ್ರತಿಧ್ವನಿ ಇಲ್ಲಿ ಎಲ್ಲಾ ಜನರಲ್ಲಿ ಆಲಿಸಲ್ಪಡುತ್ತದೆ. ಪರಸ್ಪರ ಐಕ್ಯತೆ, ಒಗ್ಗಟ್ಟು, ಪ್ರೀತಿಯ ಪರಿಸರ ಸ್ಥಾಪಿಸಲು ಈ ಸಂದೇಶ ಬಹಳ ಮುಖ್ಯವಾಗಿದೆ. ಹಲವು ಸಮಸ್ಯೆಗಳಿಗಿರುವ ಪರಿಹಾರ ಮಾರ್ಗವನ್ನು ನೀವು ಸರಿಯಾದ ಸಮಯದಲ್ಲಿಯೇ ನಮಗೆ ಸೂಚಿಸಿರುವಿರಿ. ಬಾಲ್ಟಿಮೋರ್ ನಗರದ ಸ್ಥಿತಿಯನ್ನು ಸುಧಾರಣೆ ಮಾಡಲು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಮುಂದೆ ಬಂದಿದೆ ಮತ್ತು ಸಮಾಜದಲ್ಲಿ ಸಕಾರಾತ್ಮಕವಾಗಿ ಕ್ರಿಯಾಶೀಲರಾಗಲು ತಮ್ಮ ದೃಢ ನಿರ್ಧಾರವನ್ನು ಪ್ರಕಟಿಸಿದೆ. ಇದು ಬಹಳ ಅನುಕರಣೀಯವಾದ ಉದಾಹರಣೆಯಾಗಿದೆ.

ಅನಂತರ ವರ್ಜೀನಿಯಾದ ಮಸ್‌ಜಿದ್ ಉದ್ಘಾಟಿಸಲಾಯಿತು. ಅದರ ಹೆಸರು ಮಸ್‌ಜಿದ್ ಮಸ್‌ರೂರ್ ಎಂದು. ಈ ನಗರದ ರಿಪಬ್ಲಿಕನ್ ಪಾರ್ಟಿಯ ಸೆನೆಟ್ ಸ್ಥಾನದ ಉಮೇದ್ವಾರ ಕೋರಿ ಸ್ಟುವರ್ಟ್ ಹೇಳಿದರು: ಭಾಷಣ ಮನೋಹರವೂ ಜ್ಞಾನಭರಿತವೂ ಆಗಿತ್ತು. ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ ಎಂಬ ಸಂದೇಶವನ್ನು ಅಮೇರಿಕ ಮಾತ್ರವಲ್ಲ ಇಡೀ ಜಗತ್ತು ಲಕ್ಷ್ಯವಿಟ್ಟು ಆಲಿಸಬೇಕು ಮತ್ತು ಅದನ್ನು ಕೃತ್ಯರೂಪದಲ್ಲಿ ತರಬೇಕು. ಲೋಕದ ಸ್ಥಿತಿ ಉತ್ತಮವಾಗಿಲ್ಲದ ಈ ಸಮಯದಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಪ್ರಚಾರ ಮಾಡುವುದು ಅತ್ಯಂತ ಆವಶ್ಯಕವಾಗಿದೆ. ಆದುದರಿಂದ ಈ ಮಸ್‌ಜಿದ್ ನಮಗೆ ಅಭಿಮಾನಾರ್ಹವಾಗಿದೆ. ಏಕೆಂದರೆ ನಿಮ್ಮ ಜನರು ಈ ದೇಶಕ್ಕೋಸ್ಕರ ಬಹಳ ಕೆಲಸ ಮಾಡುತ್ತಾರೆ.

ಒಬ್ಬ ಅತಿಥಿಯಾದ ಎಲೆಕ್ಸ್ ಕೇಸೇ ಹೇಳಿದರು: ನಿಮ್ಮ ಸಂದೇಶ ಬಹಳ ಪ್ರಭಾವಶಾಲಿಯಾಗಿದೆ. ನಾನು ಬಹಳ ಪ್ರಭಾವಿತನಾದೆನು. ಪ್ರತಿಯೊಂದು ಶಬ್ದ ನನ್ನ ಆತ್ಮದ ತನಕ ಪ್ರಭಾವ ಬೀರುತ್ತಿತ್ತು ಎಂದು ಹೇಳಿದರು. ಒಬ್ಬ ಮಹಿಳೆ ಶರೀನ್ ಸಾಹಿಬ, ನ್ಯೂಜೆರ್ಸಿಯಲ್ಲಿ ಸರ್ಜಿಕಲ್ ಕೋ ಓರ್ಡಿನೇಟರ್ ಆಗಿದ್ದಾರೆ, ಅವರು ಹೇಳಿದರು: ಇಸ್ಲಾಮಿನ ಸುಂದರ ತತ್ವಗಳ ಬಗ್ಗೆ ನನ್ನ ಅಭಿಪ್ರಾಯವೇನೆಂದರೆ ಕೆಲವು ವ್ಯಕ್ತಿಗಳ ಕೆಟ್ಟ ವರ್ತನೆಗಳ ಕಾರಣದಿಂದ ಪೂರ್ಣವಾಗಿ ಆ ಧರ್ಮವನ್ನು ಅಪರಾಧಿಯಾಗಿ ಮಾಡುವುದು ದೌರ್ಜನ್ಯ ಮಾಡುವುದಕ್ಕಿಂತ ಕಡಿಮೆಯಾದುದೇನೂ ಅಲ್ಲ. ಲೋರೀನ್ ಎಂಬ ಮಹಿಳೆ ಹೇಳಿದರು: ನನ್ನನ್ನು ಇಲ್ಲಿಗೆ ಆಮಂತ್ರಿಸಿದ ಕಾರಣದಿಂದ ನನಗೆ ಬಹಳ ಸಂತೋಷವಾಗಿದೆ. ಇಲ್ಲಿಗೆ ಬಂದು ನನಗೆ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಬಗ್ಗೆ ಬಹಳ ವಿಷಯಗಳನ್ನು ತಿಳಿಯಲು ಸಾಧ್ಯವಾಯಿತು. ಮಸ್‌ಜಿದ್ ನಿರ್ಮಾಣವಾದುದು ಈ ಪ್ರದೇಶಕ್ಕೆ ಒಂದು ಸುಂದರ ಕೊಡುಗೆಯಾಗಿದೆ. ಇದರಿಂದ ಯಾವುದೇ ಅಪಾಯವಿಲ್ಲ ಇದು ಶಾಂತಮಯ ಸ್ಥಳವಾಗಿದೆ.

ಈ ಮಸ್‌ಜಿದ್‌ಗಳ ಉದ್ಘಾಟನೆಗಳು ಮಾತ್ರವಲ್ಲ ಎಲ್ಲರಿಗೂ ತಿಳಿದಿರುವ ಹಾಗೆ ಗ್ವಾಟೇಮಾಲಾದಲ್ಲಿ ಹ್ಯುಮಾನಿಟಿ ಫಸ್ಟ್ ವತಿಯಿಂದ ಸ್ಥಾಪಿಸಲಾದ ಒಂದು ಆಸ್ಪತ್ರೆಯನ್ನು ಸಹ ಉದ್ಘಾಟಿಸಲಾಯಿತು. ಆ ದೇಶದ ಒಬ್ಬ ಪಾರ್ಲಿಮೆಂಟ್ ಸದಸ್ಯ ಜಮಾಅತಿಗೆ ಕೃತಜ್ಞತೆ ಅರ್ಪಿಸಿ ಹೇಳಿದರು: ಜಮಾಅತ್ ನಮ್ಮ ದೇಶದಲ್ಲಿ ಒಂದು ಆಸ್ಪತ್ರೆ ನಿರ್ಮಿಸಿ ವಿವಿಧ ಸಮುದಾಯಗಳ ಒಳಗೆ ಪ್ರೀತಿ ಮತ್ತು ಐಕ್ಯತೆಯನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದೆ. ಪೆರಾಗ್ವೆ ದೇಶದ ಉಪವಿದ್ಯಾಭ್ಯಾಸ ಮಂತ್ರಿಯಾದ ರಾಬರ್ಟ್ ಕೇನೋ ಹೇಳಿದರು: ಈ ಆಸ್ಪತ್ರೆ ಉದ್ಘಾಟನೆ ಬಹಳ ಉತ್ತಮ ಸಮಾರಂಭವಾಗಿತ್ತು. ಒಂದು ಜಮಾಅತಿನ ಜನರು ಪರಸ್ಪರ ಜೊತೆ ಸೇರಿ ಈ ಆಸ್ಪತ್ರೆಯ ನಿರ್ಮಾಣ ಪೂರ್ಣಗೊಳಿಸಿದರು ಎಂದು ತಿಳಿದಾಗ ನನಗೆ ವಿಸ್ಮಯವಾಯಿತು. ಇವೆಲ್ಲಾ ಅವುಗಳ ಆವಶ್ಯಕತೆ ಇರುವ ಕೆಲವು ಜನರ ಸಹಾಯಕ್ಕೋಸ್ಕರವಾಗಿವೆ. ಈ ಕೆಲಸ ಮಾನವರ ಬಗ್ಗೆ ಇರುವ ಪ್ರೀತಿಯ ಕೃತ್ಯರೂಪದ ಪ್ರಕಟಣೆಯಾಗಿದೆ. ಮಾನವರೆಲ್ಲರೂ ಈ ಪ್ರೀತಿಯ ಮಾರ್ಗವನ್ನು ಅನುಸರಿಸುವುದಾದರೆ ಲೋಕದಲ್ಲಿ

ಶಾಂತಿ ಸ್ಥಾಪಿಸಲ್ಪಡುವುದು ಎಂದು ಹೇಳಿದರು. ಗ್ವಾಟೇಮಾಲಾದ ಒಬ್ಬ ಪತ್ರಿಕೋದ್ಯಮಿ ಹೇಳಿದರು: ನನ್ನನ್ನು ಬಹಳ ಹೆಚ್ಚು ಪ್ರಭಾವಿಸಿದ ವಿಚಾರ ಧರ್ಮದಲ್ಲಿ ಯಾವುದೇ ಬಲಾತ್ಕಾರವಿಲ್ಲ ಎಂಬುದಾಗಿದೆ. ಪರಸ್ಪರ ಒಬ್ಬರಿನ್ನೊಬ್ಬರ ಬಗ್ಗೆ ಕಾಳಜಿ ಹೊಂದಿರಬೇಕು ಎಂಬ ವಿಚಾರ ಸಹ ನನ್ನನ್ನು ಪ್ರಭಾವಿಸಿದೆ. ಜಮಾಅತಿನ ಇಮಾಮರು ಇದೇ ಸಂದೇಶ ನಮಗೆ ನೀಡಿದರಲ್ಲದೆ ಪ್ರತಿಯೊಬ್ಬನಿಗೆ ಸಮಾನ ಹಕ್ಕುಗಳಿವೆ ಎಂದೂ ಪ್ರತಿಯೊಬ್ಬ ಮನುಷ್ಯನಿಗೆ ಉತ್ತಮ ಮಟ್ಟದ ಜೀವಿತ ಲಭಿಸಬೇಕೆಂದೂ ಹೇಳಿದರು.

ಗ್ವಾಟೇಮಾಲಾದಲ್ಲಿ ರಿವ್ಯೂ ಆಫ್ ರಿಲೀಜಿಯನ್ಸ್ ಪತ್ರಿಕೆಯ ಸ್ಪಾನಿಶ್ ಭಾಷೆಯ ಆವೃತ್ತಿ ಸಹ ಜಾರಿಗೊಳಿಸಲಾಯಿತು. ನಾವು ಸ್ಪೈನ್ ದೇಶದ ಕಡೆಗೆ ಹೆಚ್ಚು ಲಕ್ಷ್ಯ ನೀಡಲು ಪ್ರಾರಂಭಿಸಿದಾಗ ಗ್ವಾಟೇಮಾಲಾ ದೇಶದ ಒಬ್ಬ ನಿಷ್ಠಾವಂತ ಅಹ್ಮದಿಯಾದ ಡೇವಿಡ್ ಸಾಹಿಬರು ಹೇಳಿದ್ದರು: "ಸ್ಪೈನ್‌ನಲ್ಲಿ ಇಸ್ಲಾಮ್ ಹಬ್ಬಿಸಬೇಕೆಂದು ನೀವು ಬಹಳ ಗಮನ ಹರಿಸುತ್ತಿರುವಿರಿ. ಆ ದೇಶದ ಜನಸಂಖ್ಯೆ ಕೇವಲ ನಲ್ವತ್ತು ಮಿಲಿಯವಾಗಿದೆ. ಆದರೆ ನಮ್ಮ ದೇಶಗಳ ಜನಸಂಖ್ಯೆ ನಾಲ್ಕು ನೂರು ಮಿಲಿಯನ್ ಆಗಿದೆ. ಆದರೆ ನೀವು ಈ ಕಡೆಗೆ ಲಕ್ಷ್ಯ ನೀಡುತ್ತಾ ಇಲ್ಲ." ಅನಂತರ ಅಲ್ಲಿ ಸಹ ಮಿಶನ್ ಹೌಸ್‌ಗಳನ್ನು ಸ್ಥಾಪಿಸುವ ಬಗ್ಗೆ ಲಕ್ಷ್ಯ ನೀಡಲಾಯಿತು. ಜಾಮಿಅದ ವಿದ್ಯಾರ್ಥಿಗಳನ್ನು ಅಲ್ಲಿಗೆ ಕಳುಹಿಸಲು ಪ್ರಾರಂಭಿಸಲಾಯಿತು. ಈಗ ಅಲ್ಲಾಹನ ಅನುಗ್ರಹದಿಂದ ಆ ದೇಶಗಳಲ್ಲಿ ಜಮಾಅತ್‌ಗಳು ಸ್ಥಾಪಿತವಾಗುತ್ತಿವೆ.

ಗ್ವಾಟೇಮಾಲಾದಲ್ಲಿ ವಿವಿಧ ನೆರೆಹೊರೆಯ ದೇಶಗಳ ಅಹ್ಮದಿಯರೂ ಆಗಮಿಸಿದ್ದರು. ಖಲೀಫರನ್ನು ಪ್ರಥಮಬಾರಿ ಭೇಟಿಯಾದ ಜನರು ಬಹಳ ಭಾವೋದ್ವೇಗ ಭರಿತರಾಗಿದ್ದರು. ಖಿಲಾಫತ್ ಬಗ್ಗೆ ಪ್ರೀತಿ ಅವರ ಕಣ್ಣುಗಳಿಂದಲೂ ಅವರ ಹೃದಯಗಳಿಂದಲೂ ಉಕ್ಕಿಬರುತ್ತಿತ್ತು. ಒಬ್ಬ ನವ ಅಹ್ಮದಿ ಮಹಿಳೆ ಲಾಯಿರ ಮಾಲ್‌ದೇ ಸಾಹಿಬ ಹೇಳಿದರು: ನಾನು ಆಧ್ಯಾತ್ಮಿಕವಾಗಿ ಮತ್ತು ಭಾವನಾತ್ಮಕವಾಗಿ ಬಹಳ ಸಮಾಧಾನವನ್ನೂ ಶಾಂತಿಯನ್ನೂ ಅನುಭವಿಸುತ್ತಿದ್ದೇನೆ. ಅನ್ಯ ದೇಶಗಳ ಅಹ್ಮದಿ ಸಹೋದರ ಸಹೋದರಿಯರನ್ನು ಭೇಟಿಯಾದಾಗ ಈಮಾನ್ ಪುನಶ್ಚೇತನ ಪಡೆಯುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ ಖಲೀಫರ ನೇತೃತ್ವದಲ್ಲಿ ನಮಾಝ್ ಮಾಡಿದಾಗ ಅಲ್ಲಾಹನ ಬಗ್ಗೆ ಮತ್ತು ಅಹ್ಮದಿಯ್ಯತ್ ಬಗ್ಗೆ ನನ್ನ ವಿಶ್ವಾಸ ಇನ್ನಷ್ಟು ಬಲಿಷ್ಠವಾಯಿತು. ನಾನು ಈ ಮಾರ್ಗದಲ್ಲಿ ನೆಲೆನಿಲ್ಲಲು ಆಶಿಸುತ್ತೇನೆ. ಅಲ್ಲಾಹನು ಹಾಗೆಯೇ ಆಗುವಂತೆ ದಯಪಾಲಿಸಲಿ.

ಹೊಸದಾಗಿ ಬೈಅತ್ ಮಾಡಿದ ಐವನ್ ಪ್ರಾನ್ಸಿಸ್ಕೋ ಸಾಹಿಲ್ ಹೇಳುತ್ತಾರೆ: ಬೈಅತ್ ಸಮಯದಲ್ಲಿ ಎಂತಹ ಒಂದು ಕ್ಷಣ ಇತ್ತೆಂದರೆ ಅದನ್ನು ನಾನು ಶಬ್ದಗಳಲ್ಲಿ ವಿವರಿಸಲಾರೆನು. ಆ ಕ್ಷಣದಲ್ಲಿ ನನ್ನ ದೇಹವಿಡೀ ಬಿಸಿಯಾದಂತೆ ಭಾವನೆ ಉಂಟಾಯಿತು. ನಾನು ಬೆವರಲು ತೊಡಗಿದೆ. ನನ್ನ ಶರೀರದಿಂದ ವಿದ್ಯುಚ್ಛಕ್ತಿ ಹೊರಹರಿಯುವಂತೆಯೂ ಅದು ನನ್ನ ಎಲ್ಲಾ ಪಾಪದೋಷಗಳನ್ನು ತೆಗೆದುಕೊಂಡು ಹೋದಂತೆಯೂ ತೋರುತ್ತಿತ್ತು. ನಮಗೆ ಅಲ್ಲಾಹನು ಖಿಲಾಫತ್ ದಯಪಾಲಿಸಿರುವನು. ಅದಕ್ಕೋಸ್ಕರ ಅಲ್ಲಾಹನಿಗೆ ಲಕ್ಷಗಟ್ಟಲೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ನಾನು ಒಳಿತಿನ ಕಡೆಗೆ ಸಾಗುವ ಪ್ರಥಮ ಹೆಜ್ಜೆ ಇದಾಗಿದೆ ಎಂದು ನಾನು ತಿಳಿದಿದ್ದೇನೆ. ಅದು ನನ್ನೊಳಗೆ ಒಂದು ಬದಲಾವಣೆಯನ್ನು ತರುವುದು ಎಂದು ನಾನು ಭಾವಿಸುತ್ತೇನೆ.

ಇಕ್ವೇಡೋರ್ ದೇಶದ ಹೊಸದಾಗಿ ಬೈಅತ್ ಮಾಡಿದ ಅಹ್ಮದಿ ಹೇಳುತ್ತಾರೆ: ಖಲೀಫರು ಉಪಸ್ಥಿತರಿದ್ದುದು ನನಗೆ ಒಂದು ಅಪೂರ್ವ ಖಜಾನೆ ದೊರೆತಂತೆ ಆಯಿತು. ಆಧ್ಯಾತ್ಮಿಕತೆ, ಶಾಂತಿ, ಸುಖ ಸಂತೋಷಗಳ ಭಾವನೆಗಳು ನನ್ನೊಳಗೆ ಸಮಾವೇಶಗೊಂಡವು. ನನಗೆ ಬಹಳ ನೆಮ್ಮದಿ ಲಭಿಸಿತು. ಬೈಅತ್ ಸಮಯದಲ್ಲಿ ಖಲೀಫರು ತನ್ನ ಅನುಗ್ರಹೀತ ಹಸ್ತವನ್ನು ನನ್ನ ಹಸ್ತದ ಮೇಲೆ ಇರಿಸಿದಾಗ ಅದು ನನಗೆ ಎಂತಹ ಭಾಗ್ಯವಾಗಿತ್ತೆಂದರೆ ಅಂತಹ ಭಾಗ್ಯ ಹಿಂದೆಂದೂ ದೊರಕಿರಲಿಲ್ಲ.

ಗ್ವಾಟೇಮಾಲಾದ ಹೊಸದಾಗಿ ಬೈಅತ್ ಮಾಡಿದ ಸುಲೈಮಾನ್ ರೂದೂ ಸಾಹಿಬ್ ಹೇಳುತ್ತಾರೆ: ಖಲೀಫತುಲ್ ಮಸೀಹ್ ಗ್ವಾಟೇಮಾಲಕ್ಕೆ ಆಗಮಿಸಿರುವುದು ನಮಗೆ ಬಹಳ ಭಾಗ್ಯದಾಯಕವಾಗಿದೆ. ನೀವು ಇಲ್ಲಿಗೆ ಅಗಮಿಸಿರುವುದು ಅಲ್ಲಾಹನು ನಮಗೆ ನೀಡಿದ ಅನುಗ್ರಹವಾಗಿದೆ. ನೀವು ಇಲ್ಲಿಗೆ ಆಗಮಿಸುವುದರ ಬಗ್ಗೆ ತಿಳಿದಾಗ ನಮ್ಮ ಸಂತೋಷಕ್ಕೆ ಮಿತಿಯೇ ಇರಲಿಲ್ಲ. ನನ್ನೊಳಗೆ ಒಂದು ಆಧ್ಯಾತ್ಮಿಕ ಬಲಿಷ್ಠತೆ ಉಂಟಾಗಲು ತೊಡಗಿತು. ಈಗ ನಾನು ನಿಸ್ಸಂಶಯವಾಗಿ ನನ್ನೊಳಗೆ ಬಹಳ ಉತ್ತಮ ಬದಲಾವಣೆ ಅನುಭವಿಸುತ್ತಿದ್ದೇನೆ.

ಗ್ವಾಟೇಮಾಲಾದ ಡೋಮಿನಿಟಿ ಓಲ್ ಎಂಬ ವ್ಯಕ್ತಿ ಬಹಳ ಭಾವೋದ್ವೇಗ ಭರಿತರಾಗಿ ನನ್ನೊಂದಿಗೆ ಹೇಳಿದರು: ನಾನಿರುವ ಪ್ರದೇಶದ ಜನರು ಬಡವರಾಗಿದ್ದಾರೆ. ಬಹಳ ದೂರವಿರುವ ಪ್ರದೇಶ ಅದಾಗಿದೆ. ಅಲ್ಲಿ ಮಾರ್ಗಗಳು ಮೊದಲಾದುವು ಸಹ ಇಲ್ಲ. ತಾವು ಪ್ರಾರ್ಥಿಸಿರಿ ನನ್ನ ಕೋಮಿನ ಜನರು ಸಹ ಅಹ್ಮದಿ ಮುಸ್ಲಿಮರಾಗಲಿ ಎಂದು. ನನಗೆ ದೊರೆತ ಅನುಗ್ರಹ ನನ್ನ ಕೋಮಿನವರಿಗೂ ತಲಪಲಿ. ಅವರು ಬಹಳ ಉದ್ವೇಗಭರಿತರಾಗಿ ವಿನಯಾನ್ವಿತರಾಗಿ ಪ್ರಾರ್ಥಿಸಿದರು. ಅಲ್ಲಿ ಸಹ ಜಮಾಅತ್ ಹಬ್ಬುವಂತೆ ಅಲ್ಲಾಹನು ಮಾಡಲಿ.

ಮೆಕ್ಸಿಕೋ ದೇಶದ ಹೊಸದಾಗಿ ಬೈಅತ್ ಮಾಡಿದ ಘಯೂರ್ಝ್ ಖುಸೂಸ್ ಸಾಹಿಬ್ ಹೇಳುತ್ತಾರೆ: ಜಮಾಅತ್‌ನೊಂದಿಗೆ ಸಂಬಂಧ ಜೋಡಿಸಲು ಸಾಧ್ಯವಾದುದು ನನಗೆ ದೊರೆತ ಬಹಳ ದೊಡ್ಡ ಪಾರಿತೋಷಿಕವಾಗಿದೆ. ಅಲ್ಲಾಹನು ನನ್ನ ಪ್ರಾರ್ಥನೆಗಳನ್ನು ಆಲಿಸಿದುದು ನನಗೆ ದೊರೆತ ಭಾಗ್ಯವಾಗಿದೆ. ನಾನು ಅಂಧಕಾರದಲ್ಲಿದ್ದೆ. ಅಲ್ಲಾಹನು ನನ್ನನ್ನೂ ನನ್ನ ಕುಟುಂಬವನ್ನೂ ಪ್ರಕಾಶದ ಕಡೆಗೆ ಕರೆದುಕೊಂಡು ಬಂದನು. ಹಾಗೆ ನನಗೆ ನನ್ನ ಜೀವನದಲ್ಲಿ ಬದಲಾವಣೆ ಮಾಡಲು ಸಂದರ್ಭ ಲಭಿಸಿತು ಎಂದು ಹೇಳಿದರು. ಹದಿಮೂರು–ಹದಿನಾಲ್ಕು ವರ್ಷ ಪ್ರಾಯದ ಒಬ್ಬ ಬಾಲಿಕೆ ಹೇಳಿದರು: ಖಲೀಫರ ಮುಂದೆ ನಾನು ಹೇಳುವ ಮಾತು ನನಗೆ ನಾಚಿಕೆ ಉಂಟಾಗುವಂತಹದು ಆಗದಿರಲಿ ಎಂದು ನಾನು ಭಯಪಟ್ಟಿದ್ದೆ. ಆದರೆ ನನ್ನ ಭೇಟಿ ಬಹಳ ಚೆನ್ನಾಗಿತ್ತು. ಖಿಲಾಫತ್ ಬಗ್ಗೆ ಅವರಲ್ಲಿ ಅಪರಿಮಿತವಾದ ಆದರ ಭಾವನೆ ಇದೆ. ಇದೇ ರೀತಿ ವಿವಿಧ ದೇಶಗಳಿಂದ

ಅನೇಕ ಪುರುಷರೂ ಮಹಿಳೆಯರೂ ಆಗಮಿಸಿದ್ದರು. ಅವರು ತಮ್ಮ ನಿಷ್ಠೆಯನ್ನು ಪ್ರಕಟಿಸಿದ್ದರು. ಅಲ್ಲಾಹನು ಅವರೆಲ್ಲರ ನಿಷ್ಠೆಯನ್ನು ವರ್ಧಿಸುತ್ತಾ ಇರಲಿ ಮತ್ತು ಅವರು ನೈಜ ಅಹ್ಮದಿಯರಾಗುವಂತೆ ಮಾಡುವವನಾಗಲಿ.

(ಮೀಡಿಯಾ ಕವರೇಜ್ ಬಗ್ಗೆ ಅಂಕಿ ಅಂಶಗಳನ್ನು ಪ್ರಕಟಿಸುತ್ತಾ ಹುಝೂರ್ ಹೇಳಿದರು): ಅಮೇರಿಕದಲ್ಲಿ ಟಿ.ವಿ. ಮೂಲಕ ಇಪ್ಪತ್ತೆಂಟು ಲಕ್ಷದ ಅರುವತ್ತೊಂಬತ್ತು ಸಾವಿರಕ್ಕಿಂತ ಹೆಚ್ಚಿನ ಸಂಖ್ಯೆಯ ಜನರಿಗೆ ಸಂದೇಶ ತಲಪಿತು. ರೇಡಿಯೋ ಮೂಲಕ ಐವತ್ತಮೂರು ಲಕ್ಷ ತೊಂಬತ್ತೆಂಟು ಸಾವಿರಕ್ಕಿಂತ ಹೆಚ್ಚಿನ ಸಂಖ್ಯೆಯ ಜನರಿಗೆ ಸಂದೇಶ ತಲಪಿತು. ಡಿಜಿಟಲ್ ಫ್ಲೋರ್ಮ್ ವೆಬ್‌ಸೈಟ್ಸ್ ಮತ್ತು ಸೋಶಿಯಲ್ ಮೀಡಿಯಾ ಮೊದಲಾದುವುಗಳ ಮೂಲಕ ಇಪ್ಪತ್ತು ಲಕ್ಷ ಜನರಿಗೆ ಸಂದೇಶ ತಲಪಿತು. ಪತ್ರಿಕೆಗಳಲ್ಲಿ ಒಟ್ಟು 45 ಲೇಖನಗಳು ಪ್ರಕಟವಾದುವು. ಅವುಗಳ ಮೂಲಕ ಅಂದಾಜು ಹತ್ತು ಮಿಲಿಯಕ್ಕಿಂತ ಹೆಚ್ಚಿನ ಜನರಿಗೆ ಸಂದೇಶ ತಲಪುವಂತಾಯಿತು.

ಒಂದು ಅಂದಾಜಿನ ಪ್ರಕಾರ ಲ್ಯಾಟಿನ್ ಅಮೇರಿಕದ ವಿವಿಧ ದೇಶಗಳ ಪ್ರಿಂಟ್ ಮೀಡಿಯಾ, ವಿವಿಧ ಪತ್ರಿಕೆಗಳು, ಟೆಲಿವಿಶನ್ ಚ್ಯಾನಲ್‌ಗಳು ಮೊದಲಾದುವುಗಳ ಮೂಲಕ ಅಂದಾಜು ಮೂವತ್ತೆರಡು ಮಿಲಿಯ ಜನರಿಗೆ ಗ್ವಾಟೇಮಾಲಾದಲ್ಲಿ ನಾಸಿರ್ ಆಸ್ಪತ್ರೆಯ ಉದ್ಘಾಟನೆಗೆ ಸಂಬಂಧಿಸಿದ ಸಮಾಚಾರದಿಂದ ಇಸ್ಲಾಮಿನ ಸಂದೇಶ ತಲಪಿತು. ಅಲ್ಲಾಹನ ಅನುಗ್ರಹದಿಂದ ಈ ಪ್ರವಾಸ ಬಹಳ ಅನುಗ್ರಹ ಭರಿತವೂ ವಿಜಯಕರವೂ ಆಗಿತ್ತು. ಅಲ್ಲಾಹನು ಇನ್ನು ಮುಂದೆ ಸಹ ಅದರಲ್ಲಿ ಉತ್ತಮ ಪರಿಣಾಮಗಳನ್ನು ಸೃಷ್ಟಿಸುವವನಾಗಲಿ – ಆಮೀನ್.

(ಖುತ್‌ಬ ಜುಮುಅದ ಕೊನೆಯ ಭಾಗದಲ್ಲಿ ಹುಝೂರ್‌ರವರು ಮುಕರ್ರಮ್ ಸಾವದೋಗೋ ಇಸ್ಮಾಈಲ್ ಸಾಹಿಬರ ಸದ್ಗುಣಗಳನ್ನು ವಿವರಿಸಿದರು ಮತ್ತು ಜುಮುಅ ನಮಾಝ್ ನಿರ್ವಹಿಸಿದ ನಂತರ ನಮಾಝೆ ಜನಾಝ ಗಾಯಿಬ್ ನಿರ್ವಹಿಸಿದರು).

*****


***Friday Sermon delivered by Hadrath Khaleefatul Masih Al Khamis***(atba)

*At,Masjid Baithul Futhuh London, UK. On 16-11-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email***:*khutuba.kannada@gmail.com*



**You can find all the Sermons archived at**: www.alislam.org/friday-sermon